# ಆಕಾಶ ಮುಖಿ

ಭೂಮಿಯನ್ನು ಮುಕ್ಕಾಲು ಭಾಗ ಆವರಿಸಿಕೊಂಡಿರುವ ಸಾಗರ ತಳದಲ್ಲಿ ವಿಪುಲವಾದ ಅರಣ್ಯವೇ ಮೇಲ್ಮುಖವಾಗಿ ಬೆಳೆದು ನಿಂತಿದೆ. ಸೂರ್ಯನ ಬೆಳಕು ಅದರ ಚುಂಬಕ ಸೆಳೆತ. ಅದನ್ನು ಮುಟ್ಟಬೇಕು, ಸ್ಪರ್ಶಿಸಬೇಕೆಂಬ ತವಕ. ಆದ್ದರಿಂದಲೇ ನೀರಿನ ಪಾತಾಳದಲ್ಲಿರುವ ನೀರು ಸಸ್ಯವೆಲ್ಲವೂ ಆಕಾಶ ಮುಖಿಯಾಗಲು ಸದಾ ತವಕಿಸುತ್ತಿರುತ್ತದೆ. ಅಲ್ಲೇ ಇರುವ ಪ್ರಾಣಿಗಳೆಲ್ಲವೂ ಮೇಲ್ಮುಖವಾಗಿ ಚಲಿಸಲು ಬಯಸುತ್ತವೆ. ಪೃಥ್ವಿಕೊಳ್ಳವಾಸಿಗಳಾದ ಇವಕ್ಕೆ ಗಾಳಿ ಬೆಳಕನ್ನು ಅಪ್ಪಿಕೊಳ್ಳುವಾಸೆ ಸದಾ ತುಡಿಯುತ್ತಿರುತ್ತದೆ. ಬಹುಶಃ ಇವುಗಳ ಪೂರ್ವಿಕರ್‍ಯಾರೋ ಭೂಮಿ ಮೇಲೆ ಬಂದು ಸೂರ್ಯನ ನೇರ ಶಾಖ ಮತ್ತು ಬೆಳಕನ್ನು ಅನುಭವಿಸಿ ಸಂತತಿ ಸ್ಥಾಪಿಸಿದರೆಂಬ ಸತ್ಯವನ್ನು ಅರಿತಾಗ ಗಗನಮುಖಿತನದ ಇಚ್ಛೆ ಅರ್ಥವಾಗುತ್ತದೆ.

ಇನ್ನು ಭೂಮಿಯ ಮೇಲಿರುವ ಮರ ಗಿಡ ಬಳ್ಳಿಗಳನ್ನು ನೋಡಿದಾಗ, ಅವು ಸದಾ ಆಕಾಶಮುಖಿಗಳೇ! ಅವುಗಳಲ್ಲಿ ಕೆಲವಂತು ಸೂರ್ಯನ ಸ್ಪರ್ಶವಿಲ್ಲದೆ ಹೋದರೆ ಪ್ರಾಣವನ್ನೆ ಕಳೆದುಕೊಳ್ಳುತ್ತವೆ. ಮತ್ತೆ ಕೆಲವು ಕೋಮಲಕಾಯಗಳೂ ಉಂಟು. ಅವಕ್ಕೆ ನೇರ ಶಾಖ– ಸ್ಪರ್ಶ ಬೇಡ. ಆದರೆ ಸೂರ್ಯನ ಬೆಳಕು ಬೇಕು. ಇನ್ನು ದಟ್ಟವಾದ ಅರಣ್ಯಗಳಲ್ಲಿ ಭುವಿಯಿಂದ ನೇರ ಚುಮ್ಮಿದ ಬಾಣದಂತೆ ಎತ್ತರೆತ್ತರಕ್ಕೆ ಬೆಳೆದ ಮರಗಳು ಸದಾ ಊರ್ಧ್ವಮುಖಿಗಳೇ!

ಈ ಗಗನಮುಖೀ ಬುದ್ಧಿ ಪ್ರಾಣಿಗಳಲ್ಲೂ ಉಂಟು. ಅವು ತಲೆತಗ್ಗಿಸಿ ಮೇವು ಮೇದರೂ ಆಕಾಶದ ಹಂಬಲ ಸದಾ ಇದ್ದೇ ಇರುತ್ತದೆ. ತಮ್ಮ ಸಂತಸದ ಸಮಯದಲ್ಲಿ, ನಲಿದು ಕುಣಿದಾಡುವಾಗ, ಕೆನೆದು ಸದ್ದು ಮೂಡಿಸುವಾಗ ಅವು ಆಕಾಶ ಗಮನಿಗಳೇ ಆಗಿರುತ್ತವೆ. ಈ ವಿಷಯದಲ್ಲಿ ಮನುಷ್ಯನೇನೂ ಕಡಿಮೆಯಲ್ಲ; ಅವನು ಎಲ್ಲಕ್ಕಿಂತ ಒಂದು ಕೈ ಮಿಗಿಲಾಗಿ ಆಕಾಶವನ್ನು ಪ್ರೀತಿಸುತ್ತಾನೆ. ಆಕಾಶ ಅವನಿಗೆ ಮುಖ್ಯ ಪ್ರಕೃತಿ ವಿಶೇಷ. ಅಲ್ಲಿ ಅವನು ಸೌಂದರ್ಯವನ್ನು ಕಾಣುತ್ತಾನೆ. ಹಗಲು ಕಾಣುವ ಸೂರ್ಯ; ಸೂರ್ಯನ ಏರಿಳಿತಗಳಿಂದುಂಟಾಗುವ ವರ್ಣ ವ್ಯತ್ಯಾಸ; ಅವನ ಬೆಳಕು–ಸಂಜೆಗಳು. ಅವನು ಮೋಡಗಳ ಜೊತೆಯಾಡುವ ಕತ್ತಲೆ ಬೆಳಕಿನಾಟಗಳು– ಮನುಷ್ಯನ ಕನಸುಗಳನ್ನು ಬಿತ್ತಿ ಬೆಳೆಸಿವೆ. ಕಲ್ಪನೆಗಳನ್ನು ವಿಸ್ತರಿಸಿವೆ. ಅವನ ಸೃಜನಶೀಲ ಸೃಷ್ಟಿಗೆ ಬೀಜ ಬಿತ್ತಿ ಜ್ಞಾನ–ವಿಜ್ಞಾನಗಳನ್ನು ಅರಳಿಸಿವೆ; ನಾಗರೀಕತೆಗಳು ವಿಕಾಸಗೊಂಡಿವೆ.

ಆಕಾಶ ಮನುಷ್ಯನ ಭೌತಿಕ ಪ್ರತಿಭೆಯನ್ನು ಮಾತ್ರ ವಿಸ್ತರಿಸಿಲ್ಲ. ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಅವನ ಬೌದ್ಧಿಕ–ಅಧ್ಯಾತ್ಮಿಕ ಶೋಧಕ್ಕೆ ಅದು ಮೂಲವಾಯಿತು. ಗ್ರಹ–ಉಪಗ್ರಹಗಳ ಮೂಲ ಹುಡುಕಲು, ನಕ್ಷತ್ರಗಳ ರಹಸ್ಯವನ್ನು ಭೇದಿಸಲು ಆಕಾಶದ ಬಗೆಗಿನ ಅವನ ಕುತೂಹಲವೇ ಮೂಲವಾಯಿತು. ಅದರ ಮತ್ತೊಂದು ಮಗ್ಗುಲೆಂಬಂತೆ ಅವನ ಕಲ್ಪನೆಗಳು ವಿಸ್ತರಿಸಿ ಸ್ವರ್ಗ ನರಕಗಳು– ಲೋಕ ಕಲ್ಪನೆಗಳು ಬೆಳೆದವು. ಆ ಲೋಕಗಳಲ್ಲಿ ಜೀವಿಗಳನ್ನು ಕಲ್ಪಿಸಿಕೊಂಡು, ಕಾವ್ಯ ಪುರಾಣಗಳನ್ನು ಬರೆಯಲಾಯಿತು. ಅವುಗಳಿಗೆ ಬೆನ್ನೆಲುಬಾಗಿರಲೆಂಬಂತೆ ತತ್ತ್ವಸಿದ್ಧಾಂತಗಳನ್ನು ಎಣೆಯಲಾಯಿತು. ತಾನೇ ಎಣೆದ ಈ ಕಲ್ಪನಾ ಸಿಕ್ಕುಗಳಲ್ಲಿ ತಾನೇ ಬಂಧಿತನಾಗಿ, ಆತಂಕ, ನೋವು, ನಲಿವುಗಳಲ್ಲಿ ಮುಳುಗಿ ಹೋದನು. ಈ ಎಲ್ಲ ವಾಸ್ತವ–ಕಲ್ಪನಾ ಪ್ರಪಂಚದ ನಡುವೆ– ಆಕಾಶ ಸದಾ ಸವಾಲಾಗಿ, ಶೋಧಕ್ಕೆ ಕೈ ತೆರೆದು ಸದಾ ಸ್ವಾಗತಿಸುವ ನಿಗೂಢವಾಗಿ ನಿಂತು ಅಧ್ಯಾತ್ಮದ ಪ್ರಶ್ನೆಯಾಗಿಯೇ ನಿಂತುಬಿಟ್ಟಿತು. ಈ ಎಲ್ಲ ಸವಾಲುಗಳ ನಡುವೆ ಕಣ್ಣಿಗೆ ಕಾಣುವ ಸತ್ಯವೆಂಬಂತೆ ಸೂರ್ಯ ಮಾತ್ರ ಇರುತ್ತಾನೆ.

ಭಾರತದ ಅಧ್ಯಾತ್ಮ ಪ್ರಪಂಚ ಮತ್ತು ಗ್ರಾಮೀಣ ಬದುಕಿನಲ್ಲಿ ತಲೆ ಎತ್ತಿ ನಡೆಯುವುದನ್ನು ಸ್ವಾಭಿಮಾನದ ಸಂಕೇತವೆಂದು ಗುರುತಿಸಲಾಗಿದೆ. ತಲೆ ಬಗ್ಗಿಸುವುದು ಗುಲಾಮಗಿರಿಯ ಸೂಚನೆಯೆಂದು ತಿಳಿಯಲಾಗಿದೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ, ಮತೀಯ ವ್ಯವಸ್ಥೆಯಲ್ಲಿ ತಲೆತಗ್ಗಿಸಿ ನಿಲ್ಲುವುದು, ವಂದಿಸುವುದು ಗೌರವದ, ಭಯ ಭಕ್ತಿಗಳ ಅಭಿವ್ಯಕ್ತಿಯೆಂದು ಬೋಧಿಸಲಾಗಿದೆ. ಕೆಲವು ಸಂಪ್ರದಾಯಸ್ಥ ಕುಟುಂಬಗಳು ಈ ಸಂಪ್ರದಾಯವನ್ನೇ ಮೌಲ್ಯವೆಂದು ಭಾವಿಸಿ ತಮ್ಮ ಮಕ್ಕಳಿಗೆ ಸದಾ ತಗ್ಗಿ ಬಗ್ಗಿ ನಡೆಯಬೇಕೆಂದು ಆಜ್ಞೆ ಮಾಡುತ್ತಿರುತ್ತಾರೆ.

ರಾಮಮನೋಹರ ಲೋಹಿಯಾ ಅವರು ನಾವು ಸದಾ ಸವಾಲುಗಳಿಗೆ ಎದೆಯೊಡ್ಡಿ ನಿಂತಿರುವ ಪರ್ವತ ಶಿಖರಗಳಂತಿರಬೇಕೇ ಹೊರತು, ತುಸು ಗಾಳಿಗೂ ಹೆದರಿ ತಲೆ ತಗ್ಗಿಸಿ ಬಾಗುವ ಗರಿಕೆಯಂತಿರಬಾರದೆಂದು ಹೇಳುತ್ತಾರೆ. ಸಾವಿರಾರು ವರ್ಷಗಳಿಂದ ಬಾಳಿ ಬಂದಿರುವ ಸಂಸ್ಕೃತಿ ನಮ್ಮದೆಂದು ಬೀಗುವುದರಲ್ಲಿ ವಿಶೇಷತೆಯಿಲ್ಲ; ಆತ್ಮಾಭಿಮಾನದಿಂದ ತಲೆ ಎತ್ತಿ ಬಾಳಿ ಬದುಕು ಮಾಡಿದ್ದೇವೆಂಬುದು ಅತಿ ಮುಖ್ಯವಾಗುತ್ತದೆ. ಸದಾ ಪರಕೀಯ ದಾಳಿಗೆ ತಲೆ ಬಗ್ಗಿಸಿ ನೆಲಹಾಸು ಹಾಸಿದ ಭಾರತೀಯ ಸಂಸ್ಕೃತಿ ಬಗ್ಗೆ ಚಿಂತನೆ ಮಾಡಬೇಕಿದೆ.

■ ಶಿಕಾಕು

---

# ಮಾತೇ ಮುತ್ತು

★ ಸಂಪೂರ್ಣ ಒಳ್ಳೆಯವರಿಬ್ಬರಿದ್ದಾರೆ: ಒಬ್ಬ ಸತ್ತವನು, ಇನ್ನೊಬ್ಬ ಇನ್ನೂ ಹುಟ್ಟದೆ ಇರುವವನು.

–ಚೀನಾ ಗಾದೆ

★ ಜೀವನವನ್ನು ಬಿಟ್ಟು ಬೇರೆ ಐಶ್ವರ್ಯವಿಲ್ಲ.

–ಜಾನ್ ರಸ್ಕಿನ್

★ ಕೆಟ್ಟವರಿಂದ ಕೆಲವರು ಮುಂದೆ ಬರುತ್ತಾರೆ; ಒಳ್ಳೆಯದರಿಂದ ಕೆಲವರು ಹಿಂದೆ ಬೀಳುತ್ತಾರೆ.

–ಶೇಕ್ಸ್‌ಪಿಯರ್

★ ಕೆಟ್ಟದ್ದನ್ನು ಮಾಡದಿರುವುದಕ್ಕಿಂತ ಅಂತಹ ಯೋಚನೆಯನ್ನೇ ಮಾಡದಿರುವುದು ಶ್ರೇಷ್ಠ.

–ಜಾರ್ಜ್ ಬರ್ನಾರ್ಡ್ ಷಾ

★ ವಿಶ್ವವಿದ್ಯಾಲಯದ ಶೈಕ್ಷಣಿಕ ವ್ಯವಹಾರಗಳ ಮೇಲೆ ಸರ್ಕಾರಕ್ಕೆ ಯಾವುದೇ ನಿಯಂತ್ರಣ ಇರಬಾರದು. ಅದನ್ನು ಸಂಪೂರ್ಣವಾಗಿ ವ್ಯಾಸಂಗ ವಿಭಾಗಗಳಿಗೇ ವಹಿಸಬೇಕು.

–ಬಿ.ಆರ್.ಅಂಬೇಡ್ಕರ್

★ ನೀವು ಪೂಜಿಸುತ್ತಿರುವ ದೇವರನ್ನು ನಾನು ಪೂಜಿಸುವುದಿಲ್ಲ. ನಿಮ್ಮ ಧರ್ಮ ನಿಮಗೆ ಶುಭವಾಗಲಿ, ನನ್ನ ಧರ್ಮ ನನಗೆ ಶುಭ ತರಲಿ.

–ಕುರಾನ್

★ ವಿಮರ್ಶಕನ ಕೆಲಸ ಬೇರೊಬ್ಬರದ್ದನ್ನು, ತಮಗೆ ಸೇರದಿರುವ ವಸ್ತುವೊಂದನ್ನು– ಎತ್ತಿಕೊಂಡು ಅದರ ಧೂಳು ಒರೆಸಿ ಅಲಂಕರಣಗೊಳಿಸುವುದು.

–ಜಿ.ಎಸ್.ಶಿವರುದ್ರಪ್ಪ

★ ನೀನು ಸಕಲ ಜೀವದಯಾಪರನಾದ ಕಾರಣ ನಿನಗಂಜುವೆನಲ್ಲದೆ, ನಾನೀ ಬಿಜ್ಜಳನಿಗೆ ಅಂಜುವೆನೆ ಕೂಡಲ ಸಂಗಮದೇವಾ.

–ಬಸವಣ್ಣ

★ ನಾಟಕಕ್ಕೆ ಜೀವಾಳ 'ಅನುಕರಣೆ' ಹಾಗೂ 'ಮನರಂಜನೆ.' ಈ ಗುಣಗಳು ಮನುಷ್ಯ ಹುಟ್ಟಿದಾಗಿನಿಂದ ಇರುವುದರಿಂದ ಮನುಷ್ಯನಲ್ಲಿ ನಾಟಕದ ಗುಣ ಮೊದಲಿನಿಂದಲೂ ಇದೆ ಎನ್ನಬೇಕು.

–ಶ್ರೀರಂಗ

★ ಒಂದು ಒಳ್ಳೆಯ ಸಂಗತಿ ಘಟಿಸಿತು ಎಂಬುವಷ್ಟರಲ್ಲಿ ಅದೇ ಕಾಲಕ್ಕೆ ಒಂದು ದುರ್ಘಟನೆ ನಡೆಯುತ್ತದೆ. ಇದಕ್ಕೇ ಬದುಕು ಎನ್ನೋದು.

–ದ.ರಾ.ಬೇಂದ್ರೆ

★ ಸ್ವಪ್ರಯೋಜನವನ್ನು ತ್ಯಾಗ ಮಾಡಿ ಇತರರಿಗೆ ಪ್ರಯೋಜನ ಉಂಟು ಮಾಡುವವರು ಸತ್ಪುರುಷರು. ಸ್ವಪ್ರಯೋಜನಕ್ಕೆ ವಿರೋಧವಾಗದಂತೆ ಇತರರ ಪ್ರಯೋಜನಕ್ಕಾಗಿ ಯತ್ನಿಸುವವರು ಸಾಮಾನ್ಯರು. ತಮ್ಮ ಲಾಭಕ್ಕಾಗಿ ಪರಹಿತ ನಾಶ ಮಾಡುವವರು ರಾಕ್ಷಸರು.

–ಭರ್ತೃಹರಿ

★ ನಮ್ಮಲ್ಲಿರುವ ಒಳ್ಳೆಯದನ್ನು ನಾವು ಹೆಚ್ಚು ಹೆಚ್ಚಾಗಿ ಕಾಣಬಲ್ಲೆವಾದರೆ, ಇತರರಲ್ಲಿರುವ ಒಳ್ಳೆಯದನ್ನು ಹೆಚ್ಚುಹೆಚ್ಚಾಗಿ ಕಾಣುವ ಶಕ್ತಿ ತಾನಾಗಿಯೇ ಬರುತ್ತದೆ.

–ಸ್ಪೆನ್ಸರ್ ಜಾನ್ಸನ್